## 2025–26ನೇ ಸಾಲಿನ ದ್ವಿತೀಯ ಪಿ.ಯು.ಸಿ ಪೂರ್ವ ಸಿದ್ಧತಾ ಪರೀಕ್ಷೆ

**ವಿಷಯ: ರಾಜ್ಯಶಾಸ್ತ್ರ (29)** — **ಗರಿಷ್ಠ ಅಂಕಗಳು: 80**

**ಸಮಯ: 3 ಗಂಟೆ** — **ಒಟ್ಟು ಪ್ರಶ್ನೆಗಳ ಸಂಖ್ಯೆ: 37**

**ಸೂಚನೆಗಳು:**

1. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.
2. ಬಲಬದಿಯಲ್ಲಿ ಅಂಕಗಳನ್ನು ಸೂಚಿಸಲಾಗಿದೆ.
3. ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆದು ಅವುಗಳ ಉತ್ತರಗಳನ್ನು ಬರೆಯಿರಿ.
4. ಭಾಗ – ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### ಭಾಗ – ಎ

**I. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ:** **5x1=5**

1. ಅಧಿಕಾರವನ್ನು ಕಂಪನಿಯಿಂದ ಕ್ರೌನ್‌ಗೆ ಬದಲಾಯಿಸಿದ ಕಾನೂನು

   ಎ) 1858 ಬಿ) 1958 ಸಿ) 1758 ಡಿ) 1747

2. ಭಾರತದ ಪ್ರಸ್ತುತ ಮುಖ್ಯ ಚುನಾವಣಾ ಆಯುಕ್ತರು

   ಎ) ಎಸ್.ವೈ. ಖುರೇಷಿ ಬಿ) ವಿ.ಎಸ್. ಸಂಪತ್ ಸಿ) ವಾಸಿಮ್ ಜೈದಿ ಡಿ) ಗ್ಯಾನೇಶ್ ಕುಮಾರ್

3. ಆಡಳಿತದ ಪ್ರಾಥಮಿಕ ಘಟಕ

   ಎ) ಕೇಂದ್ರಾಡಳಿತ ಬಿ) ರಾಜ್ಯಾಡಳಿತ ಸಿ) ಜಿಲ್ಲಾಡಳಿತ ಡಿ) ತಾಲ್ಲೂಕು ಆಡಳಿತ

4. ಕೆಳಗಿನ ಚಿತ್ರವನ್ನು ಪರಿಗಣಿಸಿ ಮತ್ತು ಮಹಿಳೆಯರಿಗೆ ಶಿಕ್ಷಣವನ್ನು ಪ್ರಾರಂಭಿಸಿದ ಪ್ರಥಮ ಶಿಕ್ಷಕಿಯನ್ನು ಗುರ್ತಿಸಿ



   ಎ) ಸಾಲುಮರದ ತಿಮ್ಮಕ್ಕ ಬಿ) ಸಾವಿತ್ರಿಭಾ ಫುಲೆ ಸಿ) ಇಂದಿರಾ ಗಾಂಧಿ ಡಿ) ಪ್ರತಿಭಾ ಪಾಟೀಲ್

5. RTE ನ ವಿಸ್ತೃತ ರೂಪ

   i) Right to Economy ii) Right to Education iii) Right to Empower iv) Right to Emission

   ಎ) (ii) ಮಾತ್ರ ಬಿ) (i) ಮಾತ್ರ ಸಿ) (ii) ಮತ್ತು (iv) ಡಿ) (iii) ಮತ್ತು (iii)

**II. ಕೆಳಗಿನ ಪ್ರಶ್ನೆಗಳಿಗೆ ಖಾಲಿ ಬಿಟ್ಟ ಸ್ಥಳ ಭರ್ತಿ ಮಾಡಿ:** **5x1=5**

(5, ತಾಲಿಬಾನ್, 6 ವರ್ಷಗಳು, ಮೇಧಾ ಪಾಟ್ಕರ್, ಅಣ್ಣಾ ಹಜಾರೆ, ಜಯಪ್ರಕಾಶ್ ನಾರಾಯಣ್)

6. ಭಾರತ ಚುನಾವಣಾ ಆಯೋಗದ ಆಯುಕ್ತರ ಅಧಿಕಾರಾವಧಿ______
7. __________ರವರು ನರ್ಮದಾ ಬಚಾವೋ ಆಂದೋಲನದ ನಾಯಕರಾಗಿರುವರು.
8. ______ರವರು 'ಭ್ರಷ್ಟಾಚಾರದ ವಿರುದ್ಧ ಭಾರತ' ಆಂದೋಲನವನ್ನು ಮುನ್ನಡೆಸಿದರು.
9. _____ಎಂಬುದು ಆಫ್ಘಾನಿಸ್ಥಾನದಲ್ಲಿರುವ ಒಂದು ಪ್ರಮುಖ ಭಯೋತ್ಪಾದನಾ ಸಂಘಟನೆಯಾಗಿದೆ.
10. ಭದ್ರತಾ ಮಂಡಳಿಯ ಖಾಯಂ ಸದಸ್ಯರ ಸಂಖ್ಯೆ_______

AA0456

**III. ಹೊಂದಿಸಿ ಬರೆಯಿರಿ:** **5x1=5**

| | |
|---|---|
| **11.** ಎ) ವಿಧವಾ ಮನರ್ ವಿವಾಹ ಕಾಯ್ದೆ | (i) ಎಲ್.ಟಿ.ಟಿ.ಇ |
| ಬಿ) ಲೀಗ್ ಆಫ್ ನೇಷನ್ಸ್ | (ii) ಜೀನ್ ಬೋಡಿನ್ |
| ಸಿ) ಡಿ ರಿಪಬ್ಲಿಕಾ | (iii) ಸಿ.ಟಿ.ಬಿ.ಟಿ. |
| ಡಿ) ಸಮಗ್ರ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ | (iv) 1920 |
| ಇ) ಲಿಬರೇಷನ್ ಟೈಗರ್ಸ್ ಆಫ್ ತಮಿಳ್ ಈಲಮ್ | (v) 1856 |
| | (vi) 1945 |

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **5x1=5**

12. ಯಾವ ಸಭೆಯು ಮಧ್ಯಂತರ ಸರ್ಕಾರವನ್ನು ರಚಿಸಿತು?
13. ಪಂಚಮರು ಅಂದರೆ ಯಾರು?
14. ಸಾಲುಮರದ ತಿಮ್ಮಕ್ಕ ಯಾವ ಜಿಲ್ಲೆಗೆ ಸೇರಿದವರು?
15. ವರ್ಣಭೇದ ನೀತಿ ಎಂದರೇನು?
16. ಅಲಿಪ್ತ ನೀತಿ ಎಂದರೇನು?

**ಭಾಗ – ಬಿ**

**V. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2–3 ವಾಕ್ಯಗಳಲ್ಲಿ ಉತ್ತರಿಸಿ:** **5x2=10**

17. ಉಪ ಚುನಾವಣೆ ಎಂದರೇನು?
18. ಕೇಂದ್ರ ಲೋಕ ಸೇವಾ ಆಯೋಗದ ಸದಸ್ಯರಿಗಿರುವ ಅರ್ಹತೆಗಳಾವುವು?
19. ಆಡಳಿತದಲ್ಲಿ ಅನಾಮಧೇಯತೆ ಎಂದರೇನು?
20. ಅಂಬೇಡ್ಕರ್ ರವರ ಮೂರು ಜನಪ್ರಿಯ ವಾಣಿಗಳು ಯಾವುವು?
21. ನೆರೆಹೊರೆ ಶಾಂತಿ ಸಮಿತಿಗಳು ಎಂದರೇನು?
22. ಖಾಸಗೀಕರಣವು ಎಲ್ಲಿ ಮತ್ತು ಯಾವಾಗ ಪ್ರಾರಂಭವಾಯಿತು?
23. ಕೆಳಗಿನ ಚಿತ್ರವನ್ನು ನೋಡಿ ಮತ್ತು ಉದಾಹರಣೆಯೊಂದಿಗೆ ಅದರ ಅರ್ಥವನ್ನು ಬರೆಯಿರಿ.



24. ಭಾರತ ವಿದೇಶಾಂಗ ನೀತಿಗೆ ಕೊಡುಗೆಯನ್ನು ನೀಡಿದ ಇಬ್ಬರು ನಾಯಕರನ್ನು ಹೆಸರಿಸಿ.

AM0456

## ಭಾಗ – ಸಿ

**VII.ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15–20 ವಾಕ್ಯಗಳಲ್ಲಿ ಉತ್ತರಿಸಿ.** **6x5=30**

25. ಪ್ರಥಮ ಲೋಕ ಸಭಾ ಚುನಾವಣೆ ಕುರಿತು ಟಿಪ್ಪಣಿ ಬರೆಯಿರಿ.

26. ಕೆಳಗಿನ ಚಿತ್ರವನ್ನು ವೀಕ್ಷಿಸಿ ಮತ್ತು ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪಟ್ಟಿ ಮಾಡಿ.



27. ಮುಖ್ಯ ಕಾರ್ಯದರ್ಶಿಯ ಕಾರ್ಯಗಳನ್ನು ವಿವರಿಸಿ.

28. ಹಿಂದುಳಿದ ವರ್ಗಗಳ ಚಳುವಳಿಯ ಕಾರಣಗಳಾವುವು?

29. ರಾಷ್ಟ್ರ ನಿರ್ಮಾಣಕ್ಕೆ ಎದುರಾಗುವ ಅಡಚಣೆಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿ.

30. ಸಂವಿಧಾನದಲ್ಲಿರುವ ವಿವಿಧ ರೀತಿಯ ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ವಿಧಿಗಳನ್ನು ವಿವರಿಸಿ.

31. ಭಯೋತ್ಪಾದನೆಯ ವಿರುದ್ಧ ಯುವಜನತೆಯ ಪಾತ್ರವನ್ನು ವಿವರಿಸಿ.

32. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಪಾತ್ರವನ್ನು ವಿವರಿಸಿ.

33. ಭಾರತ–ಸಾರ್ಕ್‌ನ ಐದು ಪ್ರಾದೇಶಿಕ ಸಹಕಾರಿ ಕ್ಷೇತ್ರಗಳ ಕುರಿತು ಬರೆಯಿರಿ.

## ಭಾಗ – ಡಿ

**VII.ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 30–40 ವಾಕ್ಯಗಳಲ್ಲಿ ಉತ್ತರಿಸಿ:** **2x10=20**

34. ಭಾರತದಲ್ಲಿ ಪಕ್ಷ ಪದ್ಧತಿಯ ಸ್ವರೂಪವನ್ನು ವಿವರಿಸಿ

35. ಅನಕ್ಷರತೆ ಪ್ರಜಾಪ್ರಭುತ್ವಕ್ಕೆ ಒಂದು ಅಡ್ಡಿ ಹೇಗೆ? ಅದರ ನಿವಾರಣೋಪಾಯಗಳನ್ನು ವಿವರಿಸಿ.

36. ಉದಾರೀಕರಣದ ಅರ್ಥ, ಮಹತ್ವ ಮತ್ತು ರಾಜಕೀಯ ಪರಿಣಾಮಗಳನ್ನು ವಿವರಿಸಿ.

37. ಭಾರತ ವಿದೇಶಾಂಗ ನೀತಿಯ ಅರ್ಥ ಮತ್ತು ಮಹತ್ವವನ್ನು ವಿವರಿಸಿ.

## ಭಾಗ – ಇ

**(ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗಾಗಿ)**

ಪ್ರ.ಸಂ. 4. ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಯಾರು ?

ಪ್ರ.ಸಂ. 23. ಶಕ್ತಿ ಬಣಗಳು ಎಂದರೇನು? ಉದಾಹರಣೆ ಕೊಡಿ.

ಪ್ರ.ಸಂ. 26. ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪಟ್ಟಿ ಮಾಡಿ.